ಸುಮಾರು 200 ಹಳ್ಳಿಗಳಿಗೆ ನೀರನ್ನು ಒದಗಿಸಿದಂತೆ ಆಗುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ನಿಖರವಾಗಿ ಹೇಳಬೇಕು.

ಶ್ರೀ ಎಂ.ಬಿ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು): ಅಧ್ಯಕ್ಷರೆ, ಮಾನ್ಯ ಶಿವಮೂರ್ತಿಯವರು ಹೇಳಿದ ಹಾಗೆ, ಅವರ ಭಾಗದ ಕೆರೆಗಳನ್ನು ಇವತ್ತಿನ ದಿವಸ ಶೀಘ್ರವಾಗಿ ಉದ್ಘಾಟನೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ. ಇನ್ನು ಉಳಿದ ಭಾಗಗಳಲ್ಲಿ silt ತೆಗೆದು ಮಾಡ ಬೇಕಾಗಿರುವುದರಿಂದ ಉದ್ಘಾಟನೆಯಾಗಿಲ್ಲ.

ಶ್ರೀ ಕೆ.ಶಿವಮೂರ್ತಿ : Silt ಪ್ರಶ್ನೆ ಬರುವುದಿಲ್ಲ. ನೀರನ್ನು ಸ್ಟಾಕ್ ಮಾಡಿದ್ದಾರೆ. ಪೈಪ್‌ನಿಂದ trial run ಕೊಟ್ಟು ನೀರನ್ನು ತುಂಬಿಸಿದರೆ ನಾವು ರೈತರಿಂದ ಬಚಾವ್ ಆಗುತ್ತೇವೆ.

ಶ್ರೀ ಎಂ.ಬಿ.ಪಾಟೀಲ್: ಇದರ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳುತ್ತೇವೆ. ಕಾರ್ಯಕ್ರಮ ಉದ್ಘಾಟನೆ ಮಾಡುತ್ತೇವೆ.

5. ವಿಷಯ:ಕೋಲಾರ ಜಿಲ್ಲೆಯ ಕಗ್ಗನಹಳ್ಳಿಯಲ್ಲಿ ದಲಿತ ಕುಟುಂಬದವರಿಗೆ ಬಹಿಷ್ಕಾರ ಹಾಕಿರುವ ಬಗ್ಗೆ:

ಶ್ರೀ ಗೋವಿಂದ ಎಂ.ಕಾರಜೋಳ(ಮುಧೋಳ): ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯ ಕಗ್ಗನಹಳ್ಳಿಯಲ್ಲಿ ದಲಿತ ಕುಟುಂಬಗಳಿಗೆ ಬಹಿಷ್ಕಾರ ಹಾಕಿದ್ದಾರೆ. ಬಹಿಷ್ಕಾರ ಎಂಥ ಕೆಟ್ಟ ಪರಿಸ್ಥಿತಿಯಲ್ಲಿದೆ ಎಂದರೆ ನೀರು ಕೊಟ್ಟವರಿಗೆ ₹ 1,000/– ರೂ.ಗಳ ದಂಡ. ಅವರ ಜೊತೆ ಮಾತನಾಡಿ ದವರಿಗೆ ₹ 501/– ಗಳ ದಂಡವೆಂದು ಧ್ವನಿವರ್ಧಕಗಳ ಮೂಲಕ ಊರಲ್ಲೆಲ್ಲಾ ಸಾರಿ ಹೇಳಿದ್ದಾರೆ. ಈ ಘಟನೆ ದಿನಾಂಕ 26ರಂದು ನಡೆದಿದೆ. ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಸರ್ಕಾರ ಕೂಡಲೇ ಅವರನ್ನು ಬಂಧಿಸಿ ಅವರ ಮೇಲೆ ಕ್ರಮ ಜರುಗಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಮತ್ತು

ದಲಿತ ಕುಟುಂಬಗಳಿಗೆ ನೆಮ್ಮದಿಯಿಂದ ಬದುಕಲು ಅವಕಾಶ ಮಾಡಿಕೊಡಬೇಕು.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ,ಪಶು ಸಂಗೋಪನಾ, ಮಾನವ ಹಕ್ಕುಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಗೋವಿಂದ ಎಂ.ಕಾರಜೋಳ ರವರು ಏನು ಭಾವನೆಯನ್ನು ವ್ಯಕ್ತಪಡಿಸಿದ್ದಾರೆ ಅದನ್ನು ಸರ್ಕಾರ ಅರ್ಥ ಮಾಡಿಕೊಂಡಿದೆ. ಸಂಬಂಧಪಟ್ಟ ಸಚಿವರಿಂದ ಕ್ರಮ ಮತ್ತು ಈ ವಿಷಯವಾಗಿ ಮುಂದೆ ಏನು ಮಾಡಬೇಕೆಂಬ ಬಗ್ಗೆ ಹೇಳಿಕೆಯನ್ನು ಕೊಡುತ್ತೇವೆ.

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಿಸಿದಂತೆ ಗೃಹ ಸಚಿವರು ಉತ್ತರವನ್ನು ಕೊಡಬೇಕಾಗಿದೆ. ಗೃಹ ಸಚಿವರು ಇಲ್ಲೇ ಇದ್ದಾರೆ. ದೌರ್ಜನ್ಯದ ಮೇಲೆ ದೌರ್ಜನ್ಯ ನಡೆಯುತ್ತಿದೆ.

ಅಧ್ಯಕ್ಷರು: Information ಇಲ್ಲ. ನಾಳೆ ಉತ್ತರವನ್ನು ಕೊಡಿಸ ಲಾಗುವುದು. ಈ ವಿಷಯ ಸಮಾಜ ಕಲ್ಯಾಣ ಸಚಿವರಿಗೆ ಹೋಗಿದೆ.

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಅಧ್ಯಕ್ಷರೆ, ದಲಿತರ ಮೇಲೆ ನಿರಂತರ ಶೋಷಣೆ ನಡೆಯುತ್ತಿದೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ನಾಳೆ ತರಿಸಿ ಕೊಡುತ್ತೇನೆ.

ಶ್ರೀ ಪಿ.ರಾಜೀವ್: ಮಾನ್ಯ ಅಧ್ಯಕ್ಷರೆ, ನಾಳೆ ಉತ್ತರವನ್ನು ಕೊಡುತ್ತೇವೆ ಎನ್ನುವುದು ಸಮಂಜಸವಲ್ಲ. ದಲಿತರ ಮೇಲೆ ಬಹಿಷ್ಕಾರ ಮಾಡುವಂಥ ವಿಷಯ ಸರ್ಕಾರದ ಗಮನಕ್ಕೆ ಬರುವುದಿಲ್ಲ. ನಾಳೆ ಉತ್ತರವನ್ನು ಕೊಡುತ್ತೇನೆ ಎನ್ನುವುದು ಸರ್ಕಾರಕ್ಕೆ ಶೋಭೆ ತರುವುದಿಲ್ಲ.

ಶ್ರೀ ಟಿ.ಬಿ.ಜಯಚಂದ್ರ: ಸಂಬಂಧಪಟ್ಟ ಸಚಿವರು ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಯು.ಟಿ.ಖಾದರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಕೋಲಾರ ಜಿಲ್ಲೆಗೆ ಉಸ್ತುವಾರಿ ಸಚಿವನಾಗಿದ್ದೇನೆ. ಕೋಲಾರದಲ್ಲಿ ನಡೆದ ಘಟನೆ ಬಗ್ಗೆ ಮಾಧ್ಯಮಗಳ ಮೂಲಕ ನನ್ನ ಗಮನಕ್ಕೆ ಬಂದ ತಕ್ಷಣ ಮಾನ್ಯ ಜಿಲ್ಲಾಧಿಕಾರಿಗಳನ್ನು ಮತ್ತು ಮಾನ್ಯ ಎಸ್.ಪಿ. ರವರನ್ನು ಘಟನಾ ಸ್ಥಳಕ್ಕೆ ಕಳುಹಿಸಿ ಅವರಿಂದ ಸಂಪೂರ್ಣವಾದ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ಬಹುಶಃ ನಿನ್ನೆ ಸ್ಥಳೀಯ ಶಾಸಕರು ಮತ್ತು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯವರಾದ ಸನ್ಮಾನ್ಯ ಶ್ರೀ ಆಂಜನೇಯರವರು ಸಹ ಆ ಪ್ರದೇಶಕ್ಕೆ ಹೋಗಿ ಅಲ್ಲಿ ಆಗಿರುವಂಥ ಅವ್ಯವಸ್ಥೆಯನ್ನು ಅರ್ಥ ಮಾಡಿಕೊಂಡು ಯಾರು ಅಲ್ಲಿ ತಾರತಮ್ಯ ಮಾಡಿದ್ದಾರೆ ಅವರ ವಿರುದ್ಧ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕೆಂದು ಆದೇಶ ಮಾಡಿದ್ದಾರೆ. ನಾವೂ ಸಹ ಜಿಲ್ಲಾಧಿಕಾರಿಗಳು ಮತ್ತು ಎಲ್.ಪಿ.ಯವರಿಗೆ ಕ್ರಮ ಕೈಗೊಳ್ಳುವಂತೆ ಕಟ್ಟಪ್ಪಣೆ ಕೊಟ್ಟಿದ್ದೇವೆ. ತಕ್ಷಣವೇ ಕಾನೂನು ರೀತ್ಯಾ ಕ್ರಮ ಕೈಗೊಳ್ಳುತ್ತೇವೆ. ಯಾರನ್ನೂ ಸಹ ರಕ್ಷಿಸುವ ಪ್ರಶ್ನೆ ಇಲ್ಲ. We will never spare anyone ಆ ರೀತಿಯಾಗಿ ಸಾಮಾಜಿಕ ನ್ಯಾಯ ದೊರಕಿಸುವ ಕೆಲಸ ಮಾಡುತ್ತೇವೆ.

ಶ್ರೀ ಗೋವಿಂದ ಎಂ.ಕಾರಜೋಳ: ಸನ್ಮಾನ್ಯ ಸಭಾಧ್ಯಕ್ಷರೆ, ಉಸ್ತುವಾರಿ ಸಚಿವರು ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಅಲ್ಲಿ ದಲಿತ ವರ್ಗದ ಜನ ಬದುಕುವುದೇ ಕಷ್ಟವಾಗಿದೆ. ಕುಡಿಯುವುದಕ್ಕೆ ನೀರು ಕೊಡುವುದಿಲ್ಲ. ಸರ್ಕಾರ ಏನು ಮಾಡುತ್ತಿದೆ? ಉಸ್ತುವಾರಿ ಮಂತ್ರಿಗಳಾಗಿ ನೀವೇನು ಮಾಡಿದ್ದೀರಿ? ಅವರ ಜೊತೆ ಮಾತನಾಡಿದವರಿಗೆ ರೂಪಾಯಿ 501/– ದಂಡ ಮತ್ತು ಅವರಿಗೆ ಕುಡಿಯುವುದಕ್ಕೆ ನೀರು ಕೊಟ್ಟವರಿಗೆ ರೂವಾಯಿ 1000/– ದಂಡ ಎಂದು ಹೇಳಿದ್ದಾರೆ. ನೀವೇನು ಕೆಲಸ ಮಾಡುತ್ತೀರಿ?

ಶ್ರೀ ಯು.ಟಿ.ಖಾದರ್: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಇವತ್ತಿನ ಪೇಪರ್ ನೋಡಿಕೊಂಡು ಮಾತನಾಡುತ್ತಿದ್ದಾರೆ.

ಗೋವಿಂದ.ಎಂ.ಕಾರಜೋಳ: ನಾನು ಪೇಪರ್ ನೋಡಿ ಮಾತನಾಡುತ್ತಿಲ್ಲ. ಘಟನೆಯ ಬಗ್ಗೆ ತಿಳಿದುಕೊಂಡೇ ಮಾತನಾಡುತ್ತಿದ್ದೇನೆ, ಕೋಲಾರದಲ್ಲಿ ನಾನು ಇಲ್ಲ.

(ಗೊಂದಲ)

ಅಧ್ಯಕ್ಷರು : ಕಾರಜೋಳರವರೆ, ಸಾಕು.

ಶ್ರೀ ಯು.ಟಿ.ಖಾದರ್: ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಜಿಲ್ಲಾಧಿಕಾರಿಗಳು, ಎಸ್.ಪಿ.ಯವರಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ಪಷ್ಟವಾದ ನಿರ್ದೇಶನ ನೀಡಿದ್ದೇವೆ.

ಶ್ರೀ ಗೋವಿಂದ.ಎಂ.ಕಾರಜೋಳ : ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಿರ್ದಿಷ್ಟವಾದಂಥ statement ನ್ನು ನಾಳೆ House ಗೆ ಕೊಡಿ.

ಅಧ್ಯಕ್ಷರು: ಉಸ್ತುವಾರಿ ಸಚಿವರು ನಾಳೆ statement ನ್ನು ಕೊಡಿ.

ಅಧ್ಯಕ್ಷರು: ಶ್ರೀ ಬಿ.ಆರ್.ಪಾಟೀಲ್, ಸದನದಲ್ಲಿ ಹಾಜರಿಲ್ಲ.

ಶ್ರೀ ಎನ್.ಚಲುವರಾಯಸ್ವಾಮಿ: ನನ್ನದೊಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುವ ವಿಷಯವಿದೆ. ದಯಮಾಡಿ ಅವಕಾಶ ಕೊಡಿ,

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಡಿಕೆ ಬೆಳೆಗಾರರ ಬಗ್ಗೆ ವಿಷಯ ಪ್ರಸ್ತಾಪಿಸಬೇಕಾಗಿದೆ. ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು: ನಾಳೆ ಖಂಡಿತ ಅವಕಾಶ ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮುಖ್ಯಮಂತ್ರಿಗಳು ಸದನದಲ್ಲಿ ಇದ್ದಾರೆ.

ಶ್ರೀ ಎನ್.ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ನನ್ನದೊಂದು ವಿಚಾರವಿದೆ, Zero Hour ನಲ್ಲಿ miss ಆಗಿದೆ. ದಯಮಾಡಿ ಅವಕಾಶ ಕೊಡಿ,

ಅಧ್ಯಕ್ಷರು: ನಿಮ್ಮ ಹೆಸರನ್ನು ಕರೆದಾಗ ನೀವು ಸದನದಲ್ಲಿ ಹಾಜರಿರಲಿಲ್ಲ, No, I cannot do anything,

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾವು ಇದ್ದೇವೆ, ನಮ್ಮ ಹೆಸರನ್ನು ಕರೆಯಿರಿ.

ಅಧ್ಯಕ್ಷರು: ಆಯಿತು ಹೇಳಿ, ಮಾನ್ಯ ಮುಖ್ಯಮಂತ್ರಿಗಳೇ ಅಡಿಕೆ ಬೆಳೆ ವಿಚಾರದ ಬಗ್ಗೆ ಮಾತನಾಡುತ್ತಾರೆ. ದಯವಿಟ್ಟು ಸ್ವಲ್ಪ ಕೇಳಿ, ಕಾಗೇರಿಯವರೆ ಸಂಕ್ಷಿಪ್ತವಾಗಿ ಹೇಳಿ ಮುಗಿಸಿ.

6. ವಿಷಯ: ಅಡಿಕೆ ಬೆಳೆ ನಿಷೇಧದ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿರುವ affidavit ಅನ್ನು withdraw ಮಾಡುವ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಸಿರ್ಸಿ) : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಲಿಚ್ಚಿಸುತ್ತೇನೆ, ಈ ವಿಷಯ ಸಂಪೂರ್ಣವಾಗಿ ಮಾನ್ಯ ಮುಖ್ಯ ಮಂತ್ರಿಗಳ ಗಮನದಲ್ಲಿದೆ. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತಾವೂ ಸಹ ಅನೇಕ ವೇದಿಕೆಗಳ ಮೂಲಕ ಅಡಿಕೆ